REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 39 । ಜನವರಿ 4, 2023 । ಬುಧವಾರ । ಪುಟಗಳು : 8 । ಬೆಲೆ : 2/-




## ಮಹಾಮಂಡಳದ 2023ನೇ ವರ್ಷದ ಗೋಡೆ/ಟೇಬಲ್ ಕ್ಯಾಲೆಂಡರ್ ಪಟ್ಟಣ ಸಹಕಾರ ಬ್ಯಾಂಕುಗಳ ವಿಳಾಸ ಕೈಪಿಡಿ ಬಿಡುಗಡೆ



**ಬೆಂಗಳೂರು :** ದಿನಾಂಕ : 31.12.2022ರಂದು ಜರುಗಿದ ಮಹಾಮಂಡಳದ ಆಡಳಿತ ಮಂಡಳಿ ಸಭೆಯಲ್ಲಿ ಮಹಾಮಂಡಳದ 2023ನೇ ಸಾಲಿನ ಗೋಡೆ/ಟೇಬಲ್ ಕ್ಯಾಲೆಂಡರ್ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ವಿಳಾಸ ಕೈಪಿಡಿಯನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರುಗಳಾದ ವಾಸು ಹೆಚ್, ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ, ಶ್ರೀಮತಿ ವೀರಮ್ಮ ಪಿ., ರಾಜಕುಮಾರ ಬಸವರಾಜ ಬಾದವಾಡಗಿ, ಕೋಗುಂಡಿ ಬಕ್ಕೇಶಪ್ಪ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ರಾಘವ ವಿಷ್ಣು ಬಾಳೇರಿ, ಮಲಕಣ್ಣ ಡಿ. ಪಾಟೀಲ, ಕೃಷ್ಣಮೂರ್ತಿ ಭಂಡಾರಿ, ಹರೀಶ್ ಆಚಾರ್, ನಿರಂಜನ್ ಟಿ.ಎಸ್., ರಾಜಶೇಖರ್ ಎಸ್. ಹಾವಣಗಿ ಹಾಗೂ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಉಪಸ್ಥಿತರಿದ್ದರು.

2 ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲು 20 ವರ್ಷ ಬೇಕು : ಸಿ. ರಂಗರಾಜನ್

5 ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ಹಾಗೂ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ರವರಿಗೆ ಸನ್ಮಾನ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಅತ್ಮೀಯ ಸಹಕಾರಿಗಳೇ...



### ರಾಷ್ಟ್ರಕವಿ ಕುವೆಂಪು ಅವರು ತೋರಿದ ಬೆಳಕಲ್ಲಿ ಸಾಗೋಣ ಬನ್ನಿ...

2022ರಲ್ಲಿ ನಮ್ಮ ದೇಶದ ಅರ್ಥವ್ಯವಸ್ಥೆ ಆರಕ್ಕೇರದಿದ್ದರೂ, ಮೂರಕ್ಕೆ ಇಳಿಯಲಿಲ್ಲ ಅನ್ನುವುದು ಸಮಾಧಾನಕರ ವಿಷಯವಾಗಿತ್ತು. ಅಲ್ಲದೇ ಹಣದುಬ್ಬರವನ್ನು ಹತೋಟಿಗೆ ತರಲು ಆರ್‌ಬಿಐ ನಡೆಸಿದ ಎಲ್ಲ ಪ್ರಯತ್ನಗಳು ಫಲ ನೀಡದಿರುವುದರಿಂದ ಜನರು ಸಂಕಷ್ಟ ಅನುಭವಿಸುವಂತಾಗಿದೆ. ಮುಖ್ಯವಾಗಿ, ಆರ್ಥಿಕ ದುರ್ಬಲ ವರ್ಗಗಳಿಗೆ ಸೇರಿದವರು, ಅರೆಕಾಲಿಕ ನೌಕರರು ಹಾಗೂ ಕಾರ್ಮಿಕ ವರ್ಗ ಅದರ ಬಿಸಿಗೆ ಸಿಲುಕಿ ನರಳಿದರು. ಇನ್ನೊಂದೆಡೆ ನಿರುದ್ಯೋಗದ ಪ್ರಮಾಣ ಏರಿಕೆಯಾಗುತ್ತಲೇ ಇರುವುದು ಭವಿಷ್ಯದ ಬಗ್ಗೆ ಆತಂಕ ಉಂಟು ಮಾಡುವ ವಿಷಯವಾಗಿದೆ.

ಇಷ್ಟು ಸಾಲದೆಂಬಂತೆ, 2023ರಲ್ಲಿ ತಜ್ಞರ ಪ್ರಕಾರ; ಆರ್ಥಿಕತೆಯ ಮುನ್ನೋಟದಲ್ಲಿ ಹಿಂಜರಿತ ಕಂಡುಬರುತ್ತಿದೆ. ಕಾರಣ; ಮತ್ತೊಂದು ಬಗೆಯ ವೈರಾಣುವಿನ ಆಗಮನವಾಗಿದ್ದು, ಅದು ಆರ್ಥಿಕತೆಯ ಮೇಲೆ ಉಂಟು ಮಾಡುವ ಹಾನಿಯಿಂದಾಗಿ ಅನಿಶ್ಚಿತತೆಯ ಕಾರ್ಮೋಡ ಕವಿದಿದೆ.

ಮತ್ತೊಂದು 2022ರಲ್ಲಿ, ನಮ್ಮ ದೇಶ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿತು, ಸಂಭ್ರಮಿಸಿತು. ವಿಪರ್ಯಾಸವೆಂದರೆ, ದೇಶದಲ್ಲಿ ಸ್ವಾತಂತ್ರ್ಯವೆನ್ನುವುದು ತುಟ್ಟಿಯಾದಂತೆ ಕಾಣುತ್ತಿದೆ. ವ್ಯವಸ್ಥೆಯನ್ನು ಪ್ರಶ್ನಿಸುವವರನ್ನು, ಒಂದು ವರ್ಗದ ಜನರನ್ನು ಹೀಯಾಳಿಸುವ, ಬೆದರಿಸುವ, ಹಲ್ಲೆ ಮಾಡುವ ಪ್ರಸಂಗಗಳು ನಡೆಯುತ್ತಿವೆ. ಅವರನ್ನು ಮುಖ್ಯವಾಹಿನಿಯಿಂದ ಹೊರಗಿಡಲಾಗುತ್ತಿದೆ. ಅಧಿಕಾರದಲ್ಲಿರುವವರೇ ದ್ವೇಷದ ಮಾತುಗಳನ್ನು ಆಡುತ್ತಿದ್ದಾರೆ. ಪೂರ್ವಗ್ರಹಗಳ ವಿಚಾರಗಳು ಎಲ್ಲೆಡೆ ಹರಡುತ್ತಿದೆ. ಇದು ಇನ್ನೊಂದು ಬಗೆಯ ಅಗೋಚರ ವೈರಾಣುವಿನಂತೆ ನನಗೆ ಕಾಣುತ್ತಿದೆ. ಇದರ ನಿಯಂತ್ರಣ ಮಾಡಬೇಕಾದವರೇ ಇದನ್ನು ವ್ಯಾಪಕವಾಗಿ ಹರಡುತ್ತಿರುವುದು ಆತಂಕ ಉಂಟುಮಾಡುವ ವಿಷಯವಾಗಿದೆ.

ನಮ್ಮ ಪ್ರಧಾನಮಂತ್ರಿಗಳು ಬಹು ಹಿಂದೆಯೇ, ತಾವು ಜನರ ನಡುವಿನ ತಾರತಮ್ಯವನ್ನು ಸಹಿಸುವುದಿಲ್ಲವೆಂದೂ, ಅಂತಹ ನಡೆಯನ್ನು ಬಲವಾಗಿ ಖಂಡಿಸುವುದಾಗಿಯೂ, ಇಂತಹ ನಡೆಗಳ ವಿರುದ್ಧ ತಮ್ಮ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತದೆ ಎನ್ನುವ ಮಾತುಗಳನ್ನು ಹೇಳಿದ್ದರಾದರೂ, ಎಲ್ಲೆಡೆ ಕ್ಷುಲಕ ವಿಷಯಗಳಿಗೆ ಸಂಘರ್ಷಗಳು ನಡೆಯುತ್ತಿವೆ. ಈ ಸಂಘರ್ಷಗಳು ಯಾವುದೇ ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಉಂಟಾಗುತ್ತಿಲ್ಲ ಬದಲಿಗೆ, ಅನ್ಯ ಮತಾಚರಣೀಯರ ಮೇಲಿನ ಅಸಹನೆಯಿಂದಲೇ ಉಂಟಾಗುತ್ತಿದೆ, ತಡೆಯಬೇಕಾದವರೇ ಮೌನ ತಾಳಿರುವುದು ಖಂಡನೀಯವಾಗಿದೆ. ಪರಸ್ಪರ ಪ್ರೀತಿ ವಿಶ್ವಾಸಗಳು ಬೆಳೆಯಬೇಕಾದ ನೆಲೆಯಲ್ಲಿ ಒಂದಿಲ್ಲೊಂದು ಕ್ಷುಲ್ಲಕ ಕಾರಣದಿಂದ ದ್ವೇಷದ ಕಿಡಿ ಹತ್ತಿ ಕ್ಷಣಾರ್ಧದಲ್ಲಿ ಭುಗಿಲೆದ್ದು, ಉರಿಯುವ ದಳ್ಳುರಿಯಲ್ಲಿ ಮಾನವತೆಯು ಬೆಂದು ಕರಕಾಗಿ ಹೋಗುತ್ತಿದೆ.

ಇರಲಿ, ಇದೀಗ ಹೊಸ ವರ್ಷದ ಬೆಳಕಿನಲ್ಲಿ ಜನರ ನಡುವಿನ ದ್ವೇಷ ಕಳೆದು ಸ್ನೇಹ, ಸಾಮರಸ್ಯ ಮೂಡಲಿ ಎಂದು ಆಶಿಸುತ್ತಾ, ಈ ಸಂಕಷ್ಟದ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅವರನ್ನು ನೆನೆಯುತ್ತೇನೆ.

ಕುವೆಂಪು ಅವರು, ತಮ್ಮ ಕೃತಿಗಳ ಮೂಲಕವೇ ನಮ್ಮ ತಲೆಮಾರಿನವರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಿ, ಅರಿವಿನ ಕಣ್ಣಲ್ಲಿ ಲೋಕ ನೋಡಲು ಕಲಿಸಿದ ಗುರುವಾಗಿದ್ದರು. ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರ ಬನ್ನಿ, ಮೌಢ್ಯತೆಯ ಮಾರಿಯನ್ನು ಹೊರದೂಡ ಬನ್ನಿ, ವಿಜ್ಞಾನ ದೀವಟಿಗೆಯ ಹಿಡಿಯ ಬನ್ನಿ ಎಂದು ಬೆಳಕು ತೋರಿದವರು... ಅವರು ತೋರಿದ ಬೆಳಕಲ್ಲಿ ಸಾಗೋಣ ಬನ್ನಿ...

▸▸ **ಎಚ್.ಕೆ. ಪಾಟೀಲ**
ಅಧ್ಯಕ್ಷರು

## ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲು 20 ವರ್ಷ ಬೇಕು : ಸಿ. ರಂಗರಾಜನ್

**ಹೈದರಾಬಾದ್** : ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಲು ಇನ್ನೂ 20 ವರ್ಷಗಳು ಬೇಕಾಗಲಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ಸಿ. ರಂಗರಾಜನ್ ಶನಿವಾರ ಹೇಳಿದ್ದಾರೆ. ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿಸುವುದು ಅಲ್ಪಾವಧಿಗೆ ಮಹತ್ವಾಕಾಂಕ್ಷೆಯ ಗುರಿಯಾಗಿದೆ. ಹೀಗಿದ್ದರೂ ಈ ಗಾತ್ರದ ಆರ್ಥಿಕತೆಯು 3,472 ಡಾಲರ್ ತಲಾ ಆದಾಯ ಪ್ರಕಾರ ಮಧ್ಯಮ ಆದಾಯದ ದೇಶ ಎಂದು ಕರೆಸಿಕೊಳ್ಳಲಿದೆ. ಮೇಲ್ಮಧ್ಯಮ ಆದಾಯದ ದೇಶದ ಮಟ್ಟಕ್ಕೆ ತಲುಪಲು ಇನ್ನೂ ಎರಡು ವರ್ಷ ಬೇಕಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ಸೇರಲು ತಲಾ ಆದಾಯವು ಕನಿಷ್ಠ 13,205 ಡಾಲರ್ ಇರಬೇಕು. ಹೀಗಾಗಲು ದೇಶದ ಆರ್ಥಿಕತೆಯು ಶೇ.8 ರಿಂದ ಶೇ.9ರ ಆಸುಪಾಸಿನಲ್ಲಿ ಬೆಳವಣಿಗೆ ಕಾಣಬೇಕಿದ್ದು, ಇನ್ನೂ 20 ವರ್ಷಗಳು ಬೇಕಾಗಲಿವೆ ಎಂದಿದ್ದಾರೆ. ಭಾರತವು ಸದ್ಯ ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಆದರೆ, ಐಎಂಎಫ್‌ನ ಪ್ರಕಾರ ತಲಾ ಆದಾಯ ಲೆಕ್ಕದಲ್ಲಿ 197 ದೇಶಗಳ ಸಾಲಿನಲ್ಲಿ ಭಾರತವು 142ನೇ ಸ್ಥಾನದಲ್ಲಿದೆ. ಹೀಗಾಗಿ ನೀತಿ ನಿರೂಪಕರು ದೇಶದ ಆರ್ಥಿಕ ಬೆಳವಣಿಗೆ ದರವನ್ನು ಹೆಚ್ಚಿಸುವತ್ತ ತಕ್ಷಣವೇ ಹೆಚ್ಚು ಗಮನ ಹರಿಸುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

## ಆಧಾರ್ ಜೊತೆ ಪ್ಯಾನ್ ಜೋಡಣೆ 2023ರ ಮಾರ್ಚ್ ಗಡುವು

**ನವದೆಹಲಿ** : ಪ್ಯಾನ್ ಅನ್ನು ಆಧಾರ್ ಜೊತೆ ಸಂಪರ್ಕಿಸದೇ ಇದ್ದರೆ ಅಂತಹ ಪ್ಯಾನ್‌ಗಳು 2023ರ ಮಾರ್ಚ್ ನಂತರ ನಿಷ್ಕ್ರಿಯ ಆಗಲಿವೆ ಎಂದು ಆದಾಯ ತೆರಿಗೆ ಇಲಾಖೆಯು ಶನಿವಾರ ಹೇಳಿದೆ. ತಡ ಮಾಡಬೇಡಿ. ಇಂದೇ ಪ್ಯಾನ್ ಅನ್ನು ಆಧಾರ್ ಜೊತೆ ಸಂಪರ್ಕಿಸಿ ಎಂದು ಇಲಾಖೆಯು ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿದೆ. ಆದಾಯ ತೆರಿಗೆ ಕಾಯ್ದೆ 1961ರ ಪ್ರಕಾರ, 2023ರ ಮಾರ್ಚ್ 31ರ ಒಳಗಾಗಿ ಆಧಾರ್ ಜೊತೆ ಪ್ಯಾನ್ ಜೋಡಣೆ ಮಾಡುವುದು ಕಡ್ಡಾಯ. ಹಾಗೆ ಮಾಡದೇ ಇದ್ದರೆ 2023ರ ಏಪ್ರಿಲ್ 1 ರಿಂದ ಪ್ಯಾನ್ ನಿಷ್ಕ್ರೀಯ ಆಗಲಿದೆ. ಗಡುವಿನ ಒಳಗಾಗಿ ಪ್ಯಾನ್–ಆಧಾರ್ ಜೋಡಣೆ ಮಾಡದೆ ಇದ್ದರೆ ಪ್ಯಾನ್ ನಿಷ್ಕ್ರೀಯ ಆಗುತ್ತದೆ. ಅದರಿಂದಾಗಿ ಆದಾಯ ವಿವರ ಸಲ್ಲಿಸಲು, ತೆರಿಗೆ ರೀಫಂಡ್ ಪಡೆಯಲು ಆಗುವುದಿಲ್ಲ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಈಗಾಗಲೇ ಎಚ್ಚರಿಕೆ ನೀಡಿದೆ.

# ಮರ್ಚಂಟ್ಸ ಲಿಬರಲ್ ಕೋ–ಆಪ್. ಬ್ಯಾಂಕಿನಲ್ಲಿ
# 2023ರ ದಿನದರ್ಶಿಕೆ ಬಿಡುಗಡೆ, ಗ್ರಾಹಕರ ಸಂಪರ್ಕ ಸಭೆ



**ಗದಗ :** ಪ್ರತಿ ವರ್ಷದಂತೆ ಈ ವರ್ಷವೂ ಸಹ ಬ್ಯಾಂಕಿನ ದಿನದರ್ಶಿಕೆ ಬಿಡುಗಡೆ, ಉತ್ತಮ ಗ್ರಾಹಕರಿಗೆ ಸನ್ಮಾನ ಹಾಗೂ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಸನ್ಮಾನ ಹಾಗೂ ಗ್ರಾಹಕರ ಸಂಪರ್ಕ ಸಭೆ ಕಾರ್ಯಕ್ರಮವು ದಿನಾಂಕ 26.12.2022 ಸೋಮವಾರ ಬ್ಯಾಂಕಿನ ಪ್ರಧಾನ ಕಚೇರಿ ಸಭಾಂಗಣದಲ್ಲಿ ಪ.ಪೂ.ಶ್ರೀ ಜಗದ್ಗುರು ಅಭಿನವ ಬೂದೀಶ್ವರ ಮಹಾಸ್ವಾಮಿಗಳು ಹೊಸಹಳ್ಳಿ ಇವರು ಸಾನಿಧ್ಯದಲ್ಲಿ ಜರುಗಿತು. ಸದರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿಯವರು ವಹಿಸಿದ್ದರು.

ಪ್ರಾರಂಭದಲ್ಲಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿಶ್ವನಾಥ ಸಿ.ರಾಮನಕೊಪ್ಪ ಇವರು ಸ್ವಾಗತವನ್ನು ಕೋರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬ್ಯಾಂಕಿನ ನಿರ್ದೇಶಕರಾದ ಪಂಚಣ್ಣ ಕತ್ತಿಯವರು ಮುಖ್ಯ ಅತಿಥಿ ಶ್ರೀ ಸಿದ್ಧರಾಯ ವಾಯ್.ಚಿಕ್ಕಟ್ಟಿ ಇವರ ಪರಿಚಯವನ್ನು ನೀಡಿದರು. ಹಾಗೂ ಉಪಾಧ್ಯಕ್ಷರಾದ ಶ್ರೀ ಶರಣಬಸಪ್ಪ ಕುರಡಗಿ ಇವರು ಗೌರವ ಸನ್ಮಾನಿತರಾಗಿ ಆಗಮಿಸಿದ್ದ ಶ್ರೀ ಮಧುಸೂದನ ಡಿ. ಪುಣೇಕರ ಹಾಗೂ ಶ್ರೀ ಶರಣಬಸಪ್ಪ ಎಸ್.ಗುಡಿಮನಿ ಇವರ ಪರಿಚಯವನ್ನು ನೀಡಿದರು.

ಕಾರ್ಯಕ್ರಮದ ಮುಖ್ಯ ಕೇಂದ್ರ ಬಿಂದುವಾದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. /ಪಿ.ಯು.ಸಿ /ಪದವಿ/ಸ್ನಾತಕೋತ್ತರ ಪದವಿಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಟ್ಟು 14 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ನೀಡಿ ಸನ್ಮಾನಿಸಲಾಯಿತು. ಅದರಂತೆ ಐದೂ ಶಾಖೆಗಳಿಂದ ಒಟ್ಟು 9 ಜನ ಉತ್ತಮ ಗ್ರಾಹಕರನ್ನು ಗುರುತಿಸಿ ಈ ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನ ನೀಡಲಾಯಿತು. ಈ ಸಂದರ್ಭದಲ್ಲಿ ಸದರಿಯವರಿಗೆ ಗೌರವ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರಾದ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಮಧುಸೂದನ ಡಿ. ಪುಣೇಕರ ಹಾಗೂ ಕಾರ್ಯದರ್ಶಿಯಾಗಿ ಆಯ್ಕೆಯಾದ ಶ್ರೀ ಶರಣಬಸಪ್ಪ ಎಸ್.ಗುಡಿಮನಿ ಇವರಿಗೂ ಸಹ ಗೌರವಿಸಿ ಸನ್ಮಾನ ನೀಡಲಾಯಿತು. ಸನ್ 2023 ರ ದಿನದರ್ಶಿಕೆಯನ್ನು ಪ.ಪೂ.ಶ್ರೀ ಜಗದ್ಗುರು ಅಭಿನವ ಬೂದೀಶ್ವರ ಮಹಾಸ್ವಾಮಿಗಳು ಹೊಸಹಳ್ಳಿ ಅತಿಥಿಗಳು ಹಾಗೂ ಆಡಳಿತ ಮಂಡಳಿಯವರು ಬಿಡುಗಡೆಗೊಳಿಸಿದರು. ಬ್ಯಾಂಕಿನ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಿದ್ಧರಾಯ ವಾಯ್.ಚಿಕ್ಕಟ್ಟಿ ಇವರು ಮಾತನಾಡಿ ಬ್ಯಾಂಕಿನ ಅಭಿವೃದ್ಧಿಗೋಸ್ಕರ ಸಿಬ್ಬಂದಿಗಳ ಹಾಗೂ ಗ್ರಾಹಕರ ಸಹಕಾರ ಅತ್ಯವಶ್ಯವಿದ್ದು, ಈ ದಿಸೆಯಲ್ಲಿ ಸಿಬ್ಬಂದಿಯವರು ಅತ್ಯಂತ ವಿನಮ್ರ ಹಾಗೂ ಸೇವಾಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿ ಅಂತಾ ತಿಳಿಸಿದರು. ಸದರ ಕಾರ್ಯಕ್ರಮದ ನಿರೂಪಣೆಯನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ರಾಜು ಎಲ್. ಕೋಟಿಯವರು ಮಾಡಿದರು.

## ಹಣದುಬ್ಬರ, ಆರ್ಥಿಕ ಹಿಂಜರಿತದ ಹೊರತಾಗಿಯೂ ಬ್ಯಾಂಕ್ ಸಾಲಕ್ಕೆ ಹೆಚ್ಚುತ್ತಿದೆ ಬೇಡಿಕೆ

**ಹೊಸದಿಲ್ಲಿ :** 2023ರಲ್ಲಿ ದೇಶದ ರಾಷ್ಟ್ರೀಕೃತ ಮತ್ತು ಖಾಸಗಿ ವಲಯದ ಬ್ಯಾಂಕುಗಳಿಗೆ ಶುಕ್ರದೆಸೆ ಆರಂಭವಾಗಲಿದೆ ಎಂಬ ವರದಿ ಹೊರಬಿದ್ದಿದೆ. ವಾರದ ಆರಂಭದಲ್ಲಿ ಬಿಡುಗಡೆಗೊಂಡಿದ್ದ ಭಾರತೀಯ ರಿಸರ್ವ್ ಬ್ಯಾಂಕ್‌ನ ವರದಿಯಲ್ಲಿ 2021–2022ರಲ್ಲಿ ದೇಶದ ಬ್ಯಾಂಕುಗಳ ಸ್ಥಿತಿ ಸುಧಾರಿಸಿದೆ ಎಂದು ಹೇಳಿದ ಬೆನ್ನಲ್ಲೇ ಈ ವರದಿ ಹೊಸ ಭರವಸೆ ಮೂಡಿಸಿದೆ. ಹಣದುಬ್ಬರ ನಿಯಂತ್ರಣದ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕ್ ಸತತ ಬಡ್ಡಿ ದರ ಹೆಚ್ಚಳ ಪ್ರಕಟಿಸಿದ್ದು, ಆರ್ಥಿಕ ಹಿಂಜರಿತದ ಭೀತಿ ಎದುರಾಗಿದೆ. ಇದರಿಂದ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ ಎಂಬ ಆತಂಕದ ನಡುವೆಯೂ ಬ್ಯಾಂಕುಗಳ ಸಾಲದ ಹಂಚಿಕೆ ಪ್ರಮಾಣ ತೀವ್ರ ಏರುಗತಿಯಲ್ಲಿ ಇರುವುದರಿಂದ ಹಾಗೂ ಹೊಸ ಸಾಲಗಳಿಗೆ ಗ್ರಾಹಕರು ಆಸಕ್ತಿ ಉಳಿಸಿಕೊಂಡಿರುವುದು ಬ್ಯಾಂಕುಗಳ ಮೇಲಿನ ವಿಶ್ವಾಸಾರ್ಹತೆ ಹೆಚ್ಚಿಸಿದೆ. ಹೀಗಾಗಿ ಮುಂದಿನ ವರ್ಷ ಬ್ಯಾಂಕುಗಳ ಹೆಚ್ಚು ಲಾಭ ಗಳಿಸಲಿವೆ ಎಂದು ತಜ್ಞರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲದ ವಸೂಲಾತಿಯಲ್ಲಿ ತೋರಿದ ಪ್ರಗತಿಯಿಂದ ಅನುಪಯುಕ್ತ ಸ್ವತ್ತಿನ ಪ್ರಮಾಣ ತಗ್ಗುತ್ತಿದೆ. ಇದರಿಂದ ಪ್ರಸಕ್ತ ಹಣಕಾಸು ವರ್ಷದ ಅವಧಿಯಲ್ಲಿ ಬ್ಯಾಂಕುಗಳು ಉತ್ತಮ ಲಾಭವನ್ನು ಕಾಣಲಿದ್ದು, ಈ ಟ್ರೆಂಡ್ 2023ರಲ್ಲೂ ಮುಂದುವರಿಯಲಿದೆ.

ಖಾಸಗಿ ವಲಯದ ಬ್ಯಾಂಕುಗಳಲ್ಲೂ ಆಹ್ಲಾದಕರ ವಾತಾವರಣವಿದ್ದು, ಎಚ್‌ಡಿಎಫ್‌ಸಿ ಲಿಮಿಟೆಡ್ ಈಗಾಗಲೇ ಎಚ್‌ಡಿಎಫ್‌ಸಿ ಬ್ಯಾಂಕ್ ಜತೆ ವಿಲೀನಕ್ಕೆ ನಿರ್ಧರಿಸಿದೆ. ಅಲ್ಲದೇ ಜಾಗತಿಕ ರಿಟೇಲ್ ದೈತ್ಯ ಸಿಟಿ ಬ್ಯಾಂಕ್ ಖರೀದಿಸುವುದಾಗಿ ಆಕ್ಸಿಸ್ ಬ್ಯಾಂಕ್ ಘೋಷಿಸಿದೆ. ಈ ಎರಡು ಪ್ರಮುಖ ವ್ಯವಹಾರಗಳು 2023ರಲ್ಲಿ ಪೂರ್ಣಗೊಳ್ಳಲಿವೆ ಎಂದು ನಿರೀಕ್ಷಿಸಲಾಗಿದೆ.

# ಸಹಕಾರ ಸಮ್ಮೇಳನ – ದೇಶಕ್ಕೊಂದೇ ಸಹಕಾರಿ ನೀತಿ : ಅಮಿತ್ ಶಾ



**ಬೆಂಗಳೂರು :** ದೇಶದ ಉದ್ದಗಲದಲ್ಲಿ ಸಹಕಾರ ಕ್ಷೇತ್ರದ ಏಕರೂಪದ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ಇಡೀ ದೇಶಕ್ಕೆ ಅನ್ವಯವಾಗುವಂತೆ ಒಂದೇ ಸಹಕಾರಿ ನೀತಿ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಹೇಳಿದರು.

ರಾಜ್ಯದ ಸಹಕಾರ ಇಲಾಖೆ ವತಿಯಿಂದ ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಸಹಕಾರ ಫಲಾನುಭವಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಸಹಕಾರ ಕ್ಷೇತ್ರದ ಚಟುವಟಿಕೆಗಳು ಒಂದೇ ಸ್ವರೂಪದಲ್ಲಿ ಇಲ್ಲ. ಸಹಕಾರಿ ನೀತಿ ಜಾರಿಗೊಳಿಸುವ ಮೂಲಕ ಎಲ್ಲ ಸಹಕಾರ ಸಂಸ್ಥೆಗಳಲ್ಲೂ ಏಕರೂಪತೆ ತರಲಾಗುವುದು. ನೀತಿ ರೂಪಿಸುವುದಕ್ಕಾಗಿ ಕೇಂದ್ರದ ಮಾಜಿ ರೈಲ್ವೆ ಸಚಿವ ಸುರೇಶ್ ಪ್ರಭು ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಲಾಗಿದೆ ಎಂದರು.

ಒಂದೊಂದು ಚಟುವಟಿಕೆಗೂ ಪ್ರತ್ಯೇಕವಾದ ಸಹಕಾರ ಸಂಸ್ಥೆಗಳಿವೆ. ಕೃಷಿ ಉತ್ಪನ್ನಗಳ ಖರೀದಿ, ಮಾರಾಟ, ರಸಗೊಬ್ಬರ ಪೂರೈಕೆ, ಸಕ್ಕರೆ ಕಾರ್ಖಾನೆಗಳನ್ನು ನಡೆಸುವುದು ಸೇರಿದಂತೆ ಹಲವು ಬಗೆಯ ಸಹಕಾರಿ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಒಂದೇ ಸಹಕಾರಿ ಸಂಸ್ಥೆಯು ಬಹುವಿಧದ ಚಟುವಟಿಕೆಗಳನ್ನು ನಡೆಸುವ ವ್ಯವಸ್ಥೆ ಜಾರಿಗೆ ಬರಬೇಕು. ಆಗ ಸಹಕಾರಿ ಸಂಸ್ಥೆಗಳು ಹೆಚ್ಚು ಲಾಭ ಗಳಿಸಲು ಮತ್ತು ಸದೃಢವಾಗಿ ಬೆಳೆಯಲು ಅನುಕೂಲವಾಗುತ್ತದೆ. ಹೊಸ ಸಹಕಾರಿ ನೀತಿಯು ಅದಕ್ಕೆ ಪೂರಕವಾಗಿರಲಿದೆ ಎಂದು ತಿಳಿಸಿದರು.

ಕೆಲವು ರಾಜ್ಯಗಳಲ್ಲಿ ಸಹಕಾರಿ ಕ್ಷೇತ್ರ ಇನ್ನೂ ಸರಿಯಾಗಿ ಬೆಳವಣಿಗೆ ಹೊಂದಿಲ್ಲ. ಆದರೆ, ಕರ್ನಾಟಕದ ಸಹಕಾರಿ ರಂಗವು ದೇಶದಲ್ಲೇ ಮುಂಚೂಣಿಯಲ್ಲಿದೆ. ಇಲ್ಲಿನ ಸಹಕಾರಿ ಸಂಸ್ಥೆಗಳ ಪ್ರಗತಿಯು ದೇಶಕ್ಕೆ ದಿಕ್ಸೂಚಿಯಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಕರ್ನಾಟಕವು ಸಹಕಾರ ಕ್ಷೇತ್ರದಲ್ಲಿ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. 45,000 ಸಹಕಾರ ಸಂಸ್ಥೆಗಳಲ್ಲಿ 2.3ಕೋಟಿ ಸದಸ್ಯರಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷ 30ಲಕ್ಷ ರೈತರಿಗೆ ರೂ.24,000 ಕೋಟಿ ಸಾಲ ವಿತರಿಸುವ ಗುರಿ ಇದೆ. ಈವರೆಗೆ 18.11ಲಕ್ಷ ರೈತರಿಗೆ ರೂ.13480 ಕೋಟಿ ಸಾಲ ವಿತರಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರವರು ಮಾತನಾಡಿ ಸಹಕಾರಿ ಧುರೀಣರು ಹಣ ದುರುಪಯೋಗ ಮಾಡಿಕೊಂಡು ಸಾಹುಕಾರರಾಗದಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಸಹಕಾರ ರಂಗದವರ ಮೇಲಿದೆ. ಆದ್ದರಿಂದ ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

“ರೈತ ಸಮೃದ್ಧನಾಗಿದ್ದರೆ ದೇಶ ಸಮೃದ್ಧವಾಗಿರುತ್ತದೆ. ಸಣ್ಣ ರೈತರಿಗೆ 10 ಸಾವಿರ ರೂಪಾಯಿಯೂ ದೊಡ್ಡ ಮೊತ್ತವಾಗಿದೆ. ಆದ್ದರಿಂದ ಸಹಕಾರಿ ಸಂಸ್ಥೆಗಳಲ್ಲಿ ಹಗರಣ ನಡೆಯದಂತೆ ನೋಡಿಕೊಳ್ಳಿ. ಹಗರಣ ಪ್ರಕರಣಗಳು ನಡೆದು ಕೋ–ಆಪರೇಟಿವ್ ಪ್ರಮುಖರು ಕ್ಯಾಪಿಟಲಿಸ್ಟ್ ಆಗುತ್ತಿದ್ದಾರೆ.

ವಿಶ್ವಾಸಾರ್ಹತೆಗೆ ಧಕ್ಕೆ ಉಂಟಾಗದಂತೆ ಎಚ್ಚರವಹಿಸಿ’ ಎಂದು ಕಿವಿಮಾತು ಹೇಳಿದರು. ಪ್ರತಿ ಹಂತದಲ್ಲೂ ಸಹಕಾರವಿದ್ದರೆ ಬಾಳು ಬಂಗಾರವಾಗುತ್ತದೆ. ಗದಗದಲ್ಲಿ ಎಸ್.ಎಸ್.ಪಾಟೀಲರು ಮೊದಲ ಸಹಕಾರ ಸಂಘ ಸ್ಥಾಪಿಸುವ ಮೂಲಕ 125 ವರ್ಷದ ಹಿಂದೆಯೇ ದೇಶದಲ್ಲಿ ಸಹಕಾರ ರಂಗಕ್ಕೆ ನಾಂದಿ ಹಾಡಿದರು. ದೇಶದಲ್ಲೇ ಕರ್ನಾಟಕ, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಸಹಕಾರ ಕ್ಷೇತ್ರ ಯಶಸ್ವಿಯಾಗಿದೆ. ರಾಜ್ಯದ ಸಹಕಾರ ರಂಗ ಹಲವು ಮೈಲುಗಲ್ಲು ಸ್ಥಾಪಿಸಿದೆ. ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್, ಕೆಎಂಎಫ್ ಎಲ್ಲರಿಗೂ ಮಾದರಿಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ದುಪ್ಪಟ್ಟು ವಹಿವಾಟಿಗೆ ಅವಕಾಶ :** ಸರ್ಕಾರ ಮತ್ತು ಸಹಕಾರ ರಂಗದ ನಡುವೆ ಸಮನ್ವಯ ಇರಬೇಕು. ಸಹಕಾರಿಗಳು ಮನಸ್ಸು ಮಾಡಿದರೆ ಈಗ ಇರುವ ವಹಿವಾಟನ್ನು ದುಪ್ಪಟ್ಟು ಮಾಡಬಹುದು. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸರ್ಕಾರ ಅಗತ್ಯ ಸಹಕಾರ ನೀಡಲಿದೆ. ಸಹಕಾರಿ ರಂಗ ಆರ್ಥಿಕತೆಗೆ ಬಹಳ ದೊಡ್ಡ ಕೊಡುಗೆ ನೀಡುತ್ತಿದೆ. ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಮತ್ತು ರಾಜ್ಯದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಉತ್ತಮವಾಗಿ ಕಾರ್ಯನಿರ್ವಹಿಸಿ ಇಲಾಖೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ’ ಎಂದು ಪ್ರಶಂಸಿಸಿದರು.

ಸಹಕಾರ ಸಂಸ್ಥೆಗಳ ಸದಸ್ಯರಿಗೆ ಅನುಕೂಲ ಆಗಲಿ ಎಂದು ಯಶಸ್ವಿನಿ ಯೋಜನೆ ಜಾರಿಗೆ ತಂದಿದ್ದು, ಇದಕ್ಕಾಗಿ 300 ಕೋಟಿ ರೂ.ಅನುದಾನ ಮೀಸಲಿಡಲಾಗಿದೆ ಎಂದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



**ಬೆಂಗಳೂರು :** ದಿ ದಾವಣಗೆರೆ ಅರ್ಬನ್ ಕೋ-ಆಪರೇಟೀವ್ ಬ್ಯಾಂಕಿನ 2021-22ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೋಗುಂಡಿ ಬಕ್ಕೇಶಪ್ಪ ರವರು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ, ಶ್ರೀಮತಿ ವೀರಮ್ಮ ಪಿ. ಹಾಗೂ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



**ಬೆಂಗಳೂರು :** ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 2021-22ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ಭಂಡಾರಿ ರವರು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರುಗಳಾದ ಶ್ರೀ ವಾಸು ಹೆಚ್, ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ, ಶ್ರೀಮತಿ ವೀರಮ್ಮ ಪಿ., ರಾಜಕುಮಾರ ಬಸವರಾಜ ಬಾದವಾಡಗಿ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ರಾಘವ ವಿಷ್ಣು ಬಾಳೇರಿ, ಮಲಕಣ್ಣ ಡಿ. ಪಾಟೀಲ, ಕೋಗುಂಡಿ ಬಕ್ಕೇಶಪ್ಪ, ರಾಜಶೇಖರ್ ಎಸ್. ಹಾವಣಗಿ ಹಾಗೂ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಉಪಸ್ಥಿತರಿದ್ದರು.

## ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ಹಾಗೂ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ರವರಿಗೆ ಸನ್ಮಾನ



**ಬೆಂಗಳೂರು :** ದಿನಾಂಕ : 31.12.2022ರಂದು ಮಹಾಮಂಡಳದ ಆಡಳಿತ ಮಂಡಳಿ ಸಭಾಂಗಣದಲ್ಲಿ 2022ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ಮತ್ತು ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ರವರುಗಳನ್ನು ಮಹಾಮಂಡಳದ ನಿರ್ದೇಶಕರುಗಳಾದ ಕೃಷ್ಣಮೂರ್ತಿ ಭಂಡಾರಿ, ವಾಸು ಹೆಚ್, ಶ್ರೀಮತಿ ವೀರಮ್ಮ ಪಿ., ರಾಜಕುಮಾರ ಬಸವರಾಜ ಬಾದವಾಡಗಿ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ರಾಘವ ವಿಷ್ಣು ಬಾಳೇರಿ, ಮಲಕಣ್ಣ ಡಿ. ಪಾಟೀಲ, ಕೋಗುಂಡಿ ಬಕ್ಕೇಶಪ್ಪ, ರಾಜಶೇಖರ್ ಎಸ್. ಹಾವಣಗಿ ರವರುಗಳು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ರವರುಗಳು ಸನ್ಮಾನಿಸಿದರು.



**ದಿನಾಂಕ : 26.12.2022 ರಿಂದ 28.12.2022ರವರೆಗೆ ಬೆಂಗಳೂರಿನಲ್ಲಿ ಜರುಗಿದ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳ ಮೂರು ದಿನಗಳ ವಿಶೇಷ ತರಬೇತಿ ಶಿಬಿರದಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳು**

# 2023 ಹಿತವಾಗಿರಲು ಬೇಕು ಹಣಕಾಸು ಶಿಸ್ತು : ಹೊಸ ವರ್ಷಕ್ಕೆ ಆರ್ಥಿಕ 'ಪಂಚತಂತ್ರ'

**ಹಣಕಾಸು ತಜ್ಞರ ಪ್ರಕಾರ ಹೂಡಿಕೆದಾರರು ಪ್ರತಿ ತಿಂಗಳೂ ತಮ್ಮ ದುಡಿಮೆಯ ಶೇ.20–25ರಷ್ಟನ್ನು ಉಳಿಸಲೇಬೇಕು. ಭವಿಷ್ಯದಲ್ಲಿ ಎದುರಾಗುವ ಅಪಾಯಗಳು ಮತ್ತು ಹೂಡಿಕೆಗೆ ಅನುಸಾರವಾಗಿ ದುಡಿಮೆಯ ಹಣವನ್ನು ವಿಭಜಿಸಬೇಕು. ಗಳಿಸಿದ್ದರಲ್ಲಿ ಖರ್ಚುಗಳ ಬಳಿಕ ಮಾಡುವುದು ಉಳಿತಾಯವಲ್ಲ. ಬಂದ ಹಣದಲ್ಲಿ ಮೊದಲು ಉಳಿತಾಯಕ್ಕೆ ತೆಗೆದಿಟ್ಟು, ಉಳಿದದ್ದರಲ್ಲಿ ಖರ್ಚುಗಳನ್ನು ನಿಭಾಯಿಸಬೇಕು. ಮನೆ ಮಂದಿಯ ಅನಾರೋಗ್ಯ ಮುಂತಾದ ಅನಿರೀಕ್ಷಿತ 'ತುರ್ತು'ಗಳನ್ನು ಎದುರಿಸಲು ಸಿದ್ಧರಿರಬೇಕು.**

**ಬೆಂಗಳೂರು** : ಹಣದುಬ್ಬರ, ಉಕ್ರೇನ್–ರಷ್ಯಾ ಯುದ್ಧದಂಥ ಜಾಗತಿಕ ಪ್ರಭಾವಗಳಿಂದ ಅಮೆರಿಕ, ಬ್ರಿಟನ್ ಸೇರಿದಂತೆ ವಿಶ್ವದ ಬಹುತೇಕ ದೇಶಗಳು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿವೆ. ಹಣದುಬ್ಬರ ನಿಯಂತ್ರಣಕ್ಕೆ ಅಮೆರಿಕದ ಫೆಡ್ ರಿಸರ್ವ್ ಸೇರಿದಂತೆ ವಿಶ್ವದ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಏರಿಸುತ್ತಿದ್ದು 2023ರಲ್ಲಿ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವ ಸಾಧ್ಯತೆಗಳಿವೆ ಎಂದು ವಿಶ್ವಬ್ಯಾಂಕಿನಂತಹ ಜಾಗತಿಕ ಸಂಸ್ಥೆಗಳು ಮತ್ತು ಬಹುತೇಕ ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯವಾಗಿ ಭಾರತ ದೇಶವು ಆಂತರಿಕವಾಗಿ ಸದೃಢವಾಗಿದ್ದರೂ ಕೋವಿಡ್ ಅಬ್ಬರ, ಜಾಗತಿಕ ಆರ್ಥಿಕ ಹಿಂಜರಿತದಂಥ ಬೆಳವಣಿಗೆಗಳು ಭಾರತದ ಅಭಿವೃದ್ಧಿಯ ವೇಗಕ್ಕೆ ತಡೆಯೊಡ್ಡುವ ಕಳವಳಗಳೂ ಇದೆ. ಈಗಾಗಲೇ ಆರಂಭವಾಗಿರುವ ಉದ್ಯೋಗ ಕಡಿತದಂಥ ಟ್ರೆಂಡ್ ಈ ವರ್ಷ ತೀವ್ರಗೊಳ್ಳಬಹುದು. ನಾಳೆಗಳು ಚೆನ್ನಾಗಿರಬೇಕು ಎಂದರೆ, ವರ್ತಮಾನದಲ್ಲಿ ತೀರ್ಮಾನಗಳು ಸರಿಯಾಗಿರಬೇಕು. ಆರ್ಥಿಕ ಶಿಸ್ತು ಮತ್ತು ಹಣಕಾಸಿನ ಸಂಕಲ್ಪಗಳು 2023 ಅನ್ನು ಮಾತ್ರವಲ್ಲ, ಭವಿಷ್ಯದ ಎಲ್ಲ ವರ್ಷಗಳನ್ನೂ ಹಿತವಾಗಿಸಬಲ್ಲವು. ಹೀಗಾಗಿ, 2023ರಲ್ಲಿ ಎಂಥದ್ದೇ ಪರಿಸ್ಥಿತಿ ಬಂದರೂ ಯಶಸ್ವಿಯಾಗಿ ನಿಭಾಯಿಸಲು ನೆರವಾಗುವ 'ಪಂಚತಂತ್ರ'ಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

**1. ಮೊದಲು ಉಳಿತಾಯ, ನಂತರ ಖರ್ಚು :** ಉಳಿತಾಯವೇ ಹೂಡಿಕೆಯ ಅಡಿಗಲ್ಲು. ಹಣಕಾಸು ತಜ್ಞರ ಪ್ರಕಾರ ಹೂಡಿಕೆದಾರರು ಪ್ರತಿ ತಿಂಗಳೂ ತಮ್ಮ ದುಡಿಮೆಯ ಶೇ.20–25ರಷ್ಟನ್ನು ಉಳಿಸಲೇಬೇಕು. ಭವಿಷ್ಯದಲ್ಲಿ ಎದುರಾಗುವ ಅಪಾಯಗಳು ಮತ್ತು ಹೂಡಿಕೆಗೆ ಅನುಸಾರವಾಗಿ ದುಡಿಮೆಯ ಹಣವನ್ನು ವಿಭಜಿಸಬೇಕು. ಗಳಿಸಿದ್ದರಲ್ಲಿ ಖರ್ಚುಗಳ ಬಳಿಕ ಮಾಡುವುದು ಉಳಿತಾಯವಲ್ಲ. ಬಂದ ಹಣದಲ್ಲಿ ಮೊದಲು ಉಳಿತಾಯಕ್ಕೆ ತೆಗೆದಿಟ್ಟು, ಉಳಿದದ್ದರಲ್ಲಿ ಖರ್ಚುಗಳನ್ನು ನಿಭಾಯಿಸಬೇಕು. ಕಾಸು ಗಳಿಸೋನಲ್ಲ, ಕಾಸು ಉಳಿಸೋನೇ ಬಾಸು!

**2. ಇರಲಿ ತುರ್ತು ನಿಧಿ :** ದಿಢೀರ್ ಕೆಲಸಕ್ಕೆ ಕುತ್ತು, ಮನೆ ಮಂದಿಯ ಅನಾರೋಗ್ಯ ಮುಂತಾದ ಅನಿರೀಕ್ಷಿತ 'ತುರ್ತು'ಗಳನ್ನು ಎದುರಿಸಲು ಸಿದ್ಧರಿರಬೇಕು. ಕೈಗೆ ಸಿಗುವಂತೆ ತುರ್ತು ನಿಧಿಯನ್ನು ಹೊಂದಿರಬೇಕು. ಮೂರರಿಂದ ಆರು ತಿಂಗಳು ಕೆಲಸ ಇಲ್ಲದೆಯೂ ಖರ್ಚು ನಿಭಾಯಿಸುವಷ್ಟು ಹಣವನ್ನು ತುರ್ತುನಿಧಿಯಾಗಿ ಇಟ್ಟುಕೊಂಡಿರಬೇಕು ಎಂಬುದು ವಿತ್ತ ಪಂಡಿತರ ಸಲಹೆ.

**3. ಇಎಂಐ ಇಳಿಕೆಗೆ ಆದ್ಯತೆ :** ಆದಾಯದ ದೊಡ್ಡ ಭಾಗವನ್ನು ಈ ಇಎಂಐಗಳೇ ತಿಂದು ಬಿಡುತ್ತವೆ. ಸಾಲಗಳ ಜತೆಗೆ ಕ್ರೆಡಿಟ್ ಕಾರ್ಡ್‌ಗಳ ಬಡ್ಡಿದರ ಸಹ ದುಬಾರಿ.



ಕ್ರೆಡಿಟ್ ಕಾರ್ಡ್‌ನ ಸ್ಟೇಟ್‌ಮೆಂಟ್‌ಗಳನ್ನು ಎಚ್ಚರಿಕೆಯಿಂದ ಪರಾಮರ್ಶಿಸಿ, ಖರ್ಚುಗಳನ್ನು ಎಲ್ಲೆಲ್ಲಿ ತಗ್ಗಿಸಬಹುದೋ ಮಾರ್ಕ್ ಮಾಡಿಕೊಳ್ಳಿ. ಹಳೆಯ ಸಾಲಗಳ ಜತೆಗೆ ಹೊಸ ಸಾಲ ಮಾಡದೇ ಇರಲು ಪ್ರಯತ್ನಿಸಿ. ಇಎಂಐ ಇಳಿಕೆಗೆ ಆದ್ಯತೆ ನೀಡಿ.

**4. ಇನ್ನಷ್ಟು, ಮತ್ತಷ್ಟು ಹೂಡಿಕೆ :** ಷೇರುಪೇಟೆ, ಮ್ಯೂಚ್ಯುಯಲ್ ಫಂಡ್‌ಗಳ ಏರಿಳಿತಗಳ ಮೇಲೆ ಸದಾ ಕಣ್ಣಿಟ್ಟು, ಹೂಡಿಕೆ ವಿಷಯದಲ್ಲಿ ಸಾಕಷ್ಟು ಎಚ್ಚರವಹಿಸಬೇಕು. ರಿಸ್ಕ್ ಮತ್ತು ಹಣದ ಸುರಕ್ಷೆ ಇವೆರಡರ ಮಧ್ಯೆ ಸಮತೋಲನ ಸಾಧಿಸಬೇಕು. ಮಾರುಕಟ್ಟೆ ಬದಲಾದಂತೆ ನಿಮ್ಮ ಹೂಡಿಕೆಯ ಮಾದರಿಗಳೂ ಬದಲಾಗಬೇಕು. 20–25 ವಯಸ್ಸಿನವರಾದರೆ, ಮೊತ್ತ ಸಣ್ಣದಾದರೂ ಪರವಾಗಿಲ್ಲ ಆರಂಭದಿಂದಲೇ ಹೂಡಿಕೆಗೆ ಮುಂದಾಗಬೇಕು.

**5. ಹೂಡಿಕೆ ಸಾಧನಗಳಲ್ಲಿ ವೈವಿಧ್ಯತೆ :** "ಎಲ್ಲ ಮೊಟ್ಟೆಗಳನ್ನೂ ಒಂದೇ ಬುಟ್ಟಿಯಲ್ಲಿ ಹಾಕಬಾರದು," ಎನ್ನುವುದು ಹೂಡಿಕೆ ವಿಷಯದಲ್ಲಿ ಮೂಲ ಮಂತ್ರ. ಹೀಗಾಗಿ ನಿಮ್ಮ ಹೂಡಿಕೆಗಳು ಷೇರು, ಮ್ಯೂಚುವಲ್ ಫಂಡ್, ಚಿನ್ನ, ರಿಯಲ್ ಎಸ್ಟೇಟ್, ಎಫ್‌ಡಿ ಸೇರಿದಂತೆ ನಾನಾ ಸಾಧನಗಳಲ್ಲಿ ಹಂಚಿಕೆಯಾಗಿರಲಿ.

**ಬಾಹ್ಯ ಪರಿಸ್ಥಿತಿಗಳ ಪ್ರಭಾವ :** ಐಎಂಎಫ್ ಪ್ರಕಾರ, 2023ರಲ್ಲಿ ಅಮೆರಿಕದ ಜಿಡಿಪಿ ಶೇ.1, ಚೀನಾದ ಜಿಡಿಪಿ ಶೇ.4.4, ಬ್ರಿಟನ್‌ನ ಜಿಡಿಪಿ ಶೇ.0.3ರಷ್ಟಿರಲಿದೆ. ರಷ್ಯಾ, ಇಟಲಿಯ ಜಿಡಿಪಿಗಳು ಮೈನಸ್ ಆಗಲಿವೆ. ಜಾಗತಿಕ ಬಿಕ್ಕಟ್ಟುಗಳ ನಡುವೆಯೂ ದೇಶದ ಪಾಲಿಗೆ ಶುಭ ಮುನ್ನೋಟವೇ ಇದೆಯಾದರೂ, ಆದರೆ, ಮತ್ತೊಂದು ಮಗ್ಗುಲಲ್ಲಿ ಕಳವಳಗಳೂ ಇವೆ. ಭಾರತವು ಆರ್ಥಿಕ ಸಂಕಷ್ಟವನ್ನು ದಾಟಿದ್ದು ಆಗಿದೆ. ಆದಾಗ್ಯೂ, ಬಾಹ್ಯ ಪರಿಸ್ಥಿತಿಗಳು ದೇಶದ ಆರ್ಥಿಕತೆಗೆ ಹೊಡೆತ ನೀಡುವ ಸಾಧ್ಯತೆ ಇದೆ, ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಇತ್ತೀಚೆಗಷ್ಟೇ ಎಚ್ಚರಿಸಿದ್ದಾರೆ.

## ತಗ್ಗುತ್ತಿದೆ ಎನ್‌ಪಿಎ ಪ್ರಮಾಣ : ಆರ್‌ಬಿಐ

**ಮುಂಬೈ :** ಬ್ಯಾಂಕ್‌ಗಳ ಒಟ್ಟು ಎನ್‌ಪಿಎ ಪ್ರಮಾಣವು ಏಳು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 5ಕ್ಕೆ ಕುಸಿದಿದೆ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಂಡವಾಳವು ಸಾಕಷ್ಟಿದೆ ಎಂದು ಆರ್‌ಬಿಐ ತಿಳಿಸಿದೆ. ಎನ್‌ಪಿಎ ಪ್ರಮಾಣದ ಕುಸಿತ ಮುಂದುವರಿಯುವ ಸಾಧ್ಯತೆ ಇದೆ ಎಂದು ಹಣಕಾಸು ಸ್ಥಿರತೆ ವರದಿಯಲ್ಲಿ ಆರ್‌ಬಿಐ ಹೇಳಿದೆ.

ವಾಣಿಜ್ಯ ಬ್ಯಾಂಕ್‌ಗಳ ತೆರಿಗೆ ನಂತರದ ಲಾಭದ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಶೇಕಡ 40.7ರಷ್ಟು ಹೆಚ್ಚಳ ಕಂಡಿದೆ. ಎನ್‌ಪಿಎ ನಷ್ಟ ಭರ್ತಿಗೆ ತೆಗೆದಿರಿಸಬೇಕಾದ ಮೊತ್ತ ಕಡಿಮೆ ಆಗಿದ್ದು, ನಿವ್ವಳ ಬಡ್ಡಿ ಆದಾಯ ಹೆಚ್ಚಾಗಿದ್ದು ಬ್ಯಾಂಕ್‌ಗಳ ತೆರಿಗೆ ನಂತರದ ಲಾಭ




ಹೆಚ್ಚಾಗಲು ಮುಖ್ಯ ಕಾರಣ.

ಜಾಗತಿಕ ಅರ್ಥ ವ್ಯವಸ್ಥೆಯು ದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ. ಆರ್ಥಿಕ ಹಿಂಜರಿತ ಎದುರಾಗುವ ಅಪಾಯಗಳು ಹೆಚ್ಚಾಗಿವೆ ಎಂದು ಕೂಡ ವರದಿಯಲ್ಲಿ ಎಚ್ಚರಿಸಲಾಗಿದೆ. ಹಲವು ಬಗೆಯ ಆಘಾತಗಳು ಒಂದರ ಮೇಲೆ ಇನ್ನೊಂದರಂತೆ ಪರಿಣಾಮ ಬೀರಿದ ಕಾರಣದಿಂದಾಗಿ, ಹಣಕಾಸಿನ ಸ್ಥಿತಿ ಬಿಗಿಗೊಂಡಿದೆ. ಹಣಕಾಸು ಮಾರುಕಟ್ಟೆಗಳಲ್ಲಿ ಅಸ್ಥಿರತೆ ಹೆಚ್ಚಾಗಿದೆ ಎಂದು ವರದಿಯು ಹೇಳಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆ ಅರ್ಥವ್ಯವಸ್ಥೆಗಳಿಗೆ ಸವಾಲುಗಳು ಇನ್ನಷ್ಟು ಕಠಿಣವಾಗಿರುತ್ತವೆ. ಇವು ಜಾಗತಿಕ ಪರಿಣಾಮಗಳನ್ನು, ಕರೆನ್ಸಿ ಅಸ್ಥಿರತೆಯನ್ನು ಮತ್ತು ಬಂಡವಾಳದ ಹೊರಹರಿವನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದೆ.

## ಚಾಲ್ತಿ ಖಾತೆ ಕೊರತೆ ಶೇ.4.4ಕ್ಕೆ ಏರಿಕೆ




**ಮುಂಬೈ :** ದೇಶದ ಚಾಲ್ತಿ ಖಾತೆ ಕೊರತೆಯು (ಸಿಎಡಿ) ಜೂನ್ ತ್ರೈಮಾಸಿಕದ ಅಂತ್ಯದಲ್ಲಿ ಜಿಡಿಪಿಯ ಶೇಕಡ 2.2ರಷ್ಟು ಇದ್ದಿದ್ದು ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯದ ವೇಳೆಗೆ ಶೇ 4.4ಕ್ಕೆ ಏರಿಕೆ ಆಗಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

ವ್ಯಾಪಾರ ಕೊರತೆ ಹೆಚ್ಚಾಗುತ್ತಿರುವುದರಿಂದ ಚಾಲ್ತಿ ಖಾತೆ ಕೊರತೆ ಏರಿಕೆ ಆಗುತ್ತಿದೆ. ವ್ಯಾಪಾರ ಕೊರತೆ ಅಂತರವು ಹಣಕಾಸು ವರ್ಷದ ಮೊದಲಾರ್ಧದಲ್ಲಿ ರೂ. 5.22 ಲಕ್ಷ ಕೋಟಿಯಿಂದ ರೂ. 6.91 ಲಕ್ಷ ಕೋಟಿಗೆ ಏರಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ, ಭಾರತದ ಚಾಲ್ತಿ ಖಾತೆ ಕೊರತೆಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ರೂ. 3.01 ಲಕ್ಷ ಕೋಟಿಗೆ (ಶೇ 4.4) ತಲುಪಿದೆ. ಜೂನ್ ತ್ರೈಮಾಸಿಕದಲ್ಲಿ ರೂ. 1.50 ಲಕ್ಷ ಕೋಟಿಯಷ್ಟು (ಶೇ 2.2) ಇತ್ತು. 2021–22ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ರೂ. 80,374 ಕೋಟಿ ಇತ್ತು ಎಂದು ಆರ್‌ಬಿಐ ಹೇಳಿದೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ರಚಿಸಲು ನಿರ್ಧರಿಸಲಾಗಿದೆ. ಬ್ಯಾಂಕಿನ ಇಬ್ಬರು ಚುನಾಯಿತ ನಿರ್ದೇಶಕರು ಕೃಷಿ ಭೂಮಿ ಹೊಂದಿದ್ದು, ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸದಸ್ಯರಾಗಬಯಸುತ್ತಾರೆ. ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಹೊಂದಲು ಕನಿಷ್ಠ ಕೃಷಿಭೂಮಿ, ಕಡ್ಡಾಯ ವ್ಯವಸಾಯ ಅಥವಾ ಶೈಕ್ಷಣಿಕ ಅರ್ಹತೆಯು ಕಡ್ಡಾಯವೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸದಸ್ಯತ್ವಕ್ಕೆ ಅರ್ಹರಾಗಲು ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಏನೆಂಬುದನ್ನು ಭಾರತೀಯ ರಿಜರ್ವ್ ಬ್ಯಾಂಕ್ ಸ್ಪಷ್ಟಪಡಿಸಿಲ್ಲ. ರಿಜರ್ವ್ ಬ್ಯಾಂಕಿನ ಡಿಸೆಂಬರ್ 31, 2019ರ ಸುತ್ತೋಲೆಯಲ್ಲಿ ಸೂಚಿಸಲಾದ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನ ಸದಸ್ಯರಾಗಲು ಇರಬೇಕಾದ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವಗಳ ಒಂಬತ್ತು ವಿಷಯಗಳ ಪೈಕಿ ಅಕೌಂಟೆನ್ಸಿ, ಬ್ಯಾಂಕಿಂಗ್, ಹಣಕಾಸು ಮತ್ತು ಕಾನೂನು ವಿಷಯಗಳ ಬಗ್ಗೆ ಮಾತ್ರ ಸ್ಪಷ್ಟತೆ ಇದೆ. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ವೃತ್ತಿಪರ ನಿರ್ದೇಶಕರ ನೇಮಕಾತಿ ಸಂಬಂಧ ಈ ನಾಲ್ಕು ವಿಷಯಗಳ ಬಗ್ಗೆ ರಿಜರ್ವ್ ಬ್ಯಾಂಕು ಸ್ಪಷ್ಟೀಕರಣ ನೀಡಿದೆ. ಅದೇ ಮಾರ್ಗಸೂಚಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಸದಸ್ಯರ ಅರ್ಹತೆಗೂ ಅನ್ವಯಿಸುವುದು ಎಂದು ಭಾವಿಸಲಾಗಿದೆ. ಬೋರ್ಡ್ ಆಫ್ ಮ್ಯಾನೇಜ್‌ಮೆಂಟನ ರಚನೆಯು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹೊಸ ಅನುಭವವಾಗಿದೆ. ಮಾರ್ಗಸೂಚಿಗಳು ವಿಕಸನಗೊಳ್ಳುತ್ತಿವೆ ಮತ್ತು ಸ್ಪಷ್ಟೀಕರಣದ ಅಗತ್ಯವಿದೆ. ಆದ್ದರಿಂದ ಕೃಷಿ ಭೂಮಿಯನ್ನು ಹೊಂದಿರುವ (ಗಾತ್ರವನ್ನು ಲೆಕ್ಕಿಸದೆ) ಮತ್ತು ಕೃಷಿ ವ್ಯವಸಾಯದಲ್ಲಿ ತೊಡಗಿರುವ ವ್ಯಕ್ತಿಯ ಹೆಸರನ್ನು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸದಸ್ಯತ್ವಕ್ಕೆ ಪರಿಗಣಿಸಬಹುದು. ಆದರೆ, ರಿಜರ್ವ್ ಬ್ಯಾಂಕು ವಿಶೇಷ ಅರ್ಹತೆಯನ್ನು ಒಪ್ಪದಿದ್ದರೆ, ಆ ವ್ಯಕ್ತಿಯ ಸದಸ್ಯತ್ವ ರದ್ದಾಗುತ್ತದೆ ಎಂದು ಸ್ಪಷ್ಟವಾಗಿ ತಿಳಿದಿರಬೇಕು ಮತ್ತು ವ್ಯಕ್ತಿಗೆ ಮನವರಿಕೆ ಮಾಡಬೇಕು.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಈಗಾಗಲೆ ಬಿಎಂಟಿಸಿಗೆ ಎಂಟ್ರಿ ಕೊಟ್ಟಿರುವ ಎಲೆಕ್ಟ್ರಿಕ್ ಬಸ್‌ಗಳು ಇದೀಗ ಕೆಎಸ್‌ಆರ್‌ಟಿಸಿಗೂ ಲಗ್ಗೆ ಇಟ್ಟಿದ್ದು, ಶೀಘ್ರದಲ್ಲಿಯೇ ಮೈಸೂರು, ಹಾಸನ, ಕೋಲಾರ, ಚಿಕ್ಕಬಳ್ಳಾಪುರ ಭಾಗದಲ್ಲೂ ಸಂಚರಿಸಲಿವೆ.
- ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಮಹಾಮಾರಿ ಕೊರೋನಾ ವೈರಸ್ ಸೋಂಕು ಕಂಡುಬಂದಿರುವ ಹಿನ್ನೆಲೆಯಲ್ಲಿ ವಿದೇಶಗಳಿಂದ ರಾಜ್ಯಕ್ಕೆ ಬರುವವರು ಇನ್ನು ಮುಂದೆ 7 ದಿನಗಳ ಕಾಲ ಹೋಂ ಕ್ವಾರಂಟೈನ್ ನಲ್ಲಿರುವುದನ್ನು ಕಡ್ಡಾಗೊಳಿಸಲಾಗಿದೆ.
- ಪಶ್ಚಿಮಘಟ್ಟದಲ್ಲಿ ಬಣ್ಣದ ಚಿಟ್ಟೆಗಳು ವೇಗವಾಗಿ ವಿಕಸನಗೊಳ್ಳುತ್ತಿವೆ. ಬಣ್ಣ ಹಾಗೂ ಮಾದರಿಯಲ್ಲಿ ಹೆಚ್ಚು ವೇಗದಲ್ಲಿ ವಿಕಸನಗೊಂಡಿವೆ ಎನ್ನುವ ವಿಚಾರ ಸಂಶೋಧನೆ ಮೂಲಕ ಬಹಿರಂಗವಾಗಿದೆ.
- ಹಿಮಾಚಲ ಪ್ರದೇಶದ ಬುಡಕಟ್ಟು ಜಿಲ್ಲೆ ಲಾಹೌಲ್‌ನಲ್ಲಿ ಅಳಿವಿನಂಚಿನಲ್ಲಿರುವ ಹಿಮ ಚಿರತೆಗಳ ಸಂಖ್ಯೆಯಲ್ಲಿ ಏರಿಕೆಯಾಗಿರುವುದು ತಜ್ಞರ ತಂಡವೊಂದರ ಅಧ್ಯಯನದಿಂದ ತಿಳಿದುಬಂದಿದೆ.
- ಆಂಧ್ರ ಪ್ರದೇಶದ ಕಾಕಿನಾಡ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ಇಂಗ್ಲಿಷ್ ಶಿಕ್ಷಕ ಜಿ.ವಿ.ಪ್ರಸಾದ್ ಅವರ ಮಾರ್ಗದರ್ಶನದಲ್ಲಿ 12 ತಜ್ಞರ ತಂಡವು ಅಲ್ಲಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅಮೆರಿಕನ್ ಉಚ್ಚಾರಣೆಯಲ್ಲಿ ಇಂಗ್ಲಿಷ್ ಮಾತನಾಡಲು ಕಲಿಸಲಾಗುತ್ತಿದೆ.
- ವಿಶ್ವದ ಅತ್ಯಂತ ದೊಡ್ಡ ಕುಟುಂಬದ ದಾಖಲೆಯನ್ನು ಮುರಿದು ಗಿನ್ನಿಸ್ ವಿಶ್ವ ದಾಖಲೆ ಮಾಡಬೇಕೆಂಬ ಗುರಿಯೊಂದಿಗೆ ಕೊಡವ ಸಮುದಾಯದ ಒಂದೇ ಕುಟುಂಬದ ಸುಮಾರು 6,000 ಜನ ವಿರಾಜಪೇಟೆಯ ಬಿಟ್ಟಂಗಾಲದಲ್ಲಿ ಒಂದೆಡೆ ಸೇರಿದರು.
- ಹರಿಯಾಣದ ಕರ್ನಾಲ್‌ನಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ತಳಿ ಸಂರಕ್ಷಣೆ ಪ್ರಶಸ್ತಿ ಕಾರ್ಯಕ್ರಮದಲ್ಲಿ ಮಳವಳ್ಳಿ ತಾಲೂಕಿನ ಬಂಡೂರು ಗ್ರಾಮದ ಯು. ಕೆ. ಶ್ರೀನಿವಾಸ್ ಆಚಾರ್ಯ ಅವರು ತಮ್ಮ ಶುದ್ಧ ಬಂಡೂರು ತಳಿಯ ಕುರಿಗಳ ತಳಿ ಸಂರಕ್ಷಣೆಗಾಗಿ ಮೂರನೇ ಬಹುಮಾನ ಪಡೆದಿದ್ದಾರೆ.

## ಓದುಗರ ಅನಿಸಿಕೆ...




**ಹಣಕಾಸು ವಂಚನೆ ನಡೆಯುವ ಮುಂಚೆ :** ಖಾಸಗಿ ಕ್ರಿಪ್ಟೋ ಕರೆನ್ಸಿಗಳನ್ನು ಬೆಳೆಯಲು ಬಿಟ್ಟರೆ ಮುಂದಿನ ದಿನಗಳಲ್ಲಿ ಅವು ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಬಹುದು ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರು ನೀಡಿರುವ ಎಚ್ಚರಿಕೆ ಸಕಾಲಿಕವಾಗಿದೆ. ಇದೇ ಮಾದರಿಯ ಡಿಜಿಟಲ್ ಕರೆನ್ಸಿ ವಿನಿಮಯ ನಡೆಸುವ ಹಲವು ಕಂಪನಿಗಳು ಇದ್ದು ಹಣಕಾಸು ವಂಚನೆ ನಡೆಯುವ ಮುಂಚೆಯೇ ಎಲ್ಲವನ್ನೂ ನಿಷೇಧಿಸಬೇಕಿದೆ.

**▸▸ ಕಿರಣ್ ಕುಮಾರ್ ವಿ., ದಾವಣಗೆರೆ**

**ಆರ್ಥಿಕ ಕುಸಿತದ ಆತಂಕ :** ಬಂಡವಾಳ ಹೂಡಿಕೆಯು ಇನ್ನೂ ಚೇತರಿಸಿಕೊಂಡಿಲ್ಲದ ಕಾರಣ, ಉದ್ದಿಮೆಗಳು ಬೆಳವಣಿಗೆ ಕಾಣುತ್ತಿಲ್ಲ. ಅಲ್ಲದೆ, ಪ್ರಸ್ತುತ ಜನರ ಖರೀದಿ ಸಾಮರ್ಥ್ಯವು ಕುಗ್ಗಿದೆ. ಇದರಿಂದ ದೇಶದ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿದೆ. ಕೇಂದ್ರ ಸರ್ಕಾರ ಇದಕ್ಕೆ ಸೂಕ್ತ ಚಾಲನಾ ಶಕ್ತಿ ನೀಡಲು ಕಾರ್ಯಪ್ರವರ್ತವಾಗಬೇಕಿದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳು ಆರ್ಥಿಕ ಕುಸಿತಕ್ಕೆ ಆತಂಕಕ್ಕೆ ಸಿಲುಕಬೇಕಾದಿತು.

**▸▸ ಎಲ್. ಗುರುಪ್ರಸಾದ್, ಮೈಸೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.